ಯಾರಾದರೂ ತಮ್ಮ ಮನೆಗೆ ಒಮ್ಮೆ ಕರೆದರೆ, ಹತ್ತು ಸಲ ಯೋಚಿಸುವ ನನಗೆ ಆಕೆ ಹೀಗೆ ಬಂದಿದ್ದು ವಿಚಿತ್ರವೆನ್ನಿಸಿತು. ಆದರೂ ಅದನ್ನು ತೋರುಗೊಡದೆ ಉಪಚರಿಸಿದೆ. 'ನಮ್ಮ ಮನೆಗೊಮ್ಮೆ ಬಾ, ನಮ್ಮನೇಲ್ಲೂ ಕಾದಂಬರಿ, ಕತೆ ಪುಸ್ತಕ ಎಲ್ಲ ಇವೆ.' ಅಂದಿದ್ದಳು ಶೆಲ್ಫಿನಲ್ಲಿರುವ ಪುಸ್ತಕಗಳನ್ನು ನೋಡುತ್ತ. ಮರುದಿನ ಒಂದು ಕಾದಂಬರಿ ತಂದುಕೊಟ್ಟು, ಉಳಿದವುಗಳು ಮನೆಗೆ ಬಂದರೆ ಮಾತ್ರ ಅಂತ ಆಸೆ ಹಚ್ಚಿದಳು.

ಹೆಚ್ಚೂಕಡಿಮೆ ಒಂದುವಾರದ ತನಕ ಆಕೆ ಸೌಮ್ಯವಾಗಿ ವರ್ತಿಸಿದ್ದನ್ನು ಕಂಡು ಅಂತೂ ಬದಲಾದಳು ಅಂದುಕೊಳ್ಳುತ್ತ ಲೈಬ್ರರಿಯ ಕೌಂಟರಿನ ಬಳಿ ನಿಂತಿದ್ದೆ. ಹಿಂದಿನಿಂದ ಬಂದ ಯಾರೋ ಐಸುಕ್ಯೆಗಳಿಂದ ತೋಳು ಹಿಡಿದಂತೆನ್ನಿಸಿ ಬೆಚ್ಚಿದೆ. 'ನಮ್ಮ ಅಮ್ಮಾಗ ನಿನ್ ಬಗ್ಗೆ ಎಲ್ಲಾ ಹೇಳೇನಿ, ಮನೀಗೆ ಕರ್ಕೊಂಬಾ ಅಂದಾರು. ಪ್ಲೀಸ್, ಒಮ್ಮೆ ನಮ್ಮನೀಗ ಬಾಲ್ಲಾ. ಈ ಗುರ್ವಾರ ಬರ್ತೀ? ರಾಯರವಾರ.' ಲೈಬ್ರರಿಯ ಶಾಂತತೆ ಕದಡದಂತೆ ಉಸುರಿದಳು. 'ನಾನು ಅವರ ಮನೆಗೆ ಹೋಗುವುದಕ್ಕೂ, ರಾಯರವಾರಕ್ಕೂ ಏನು ಸಂಬಂಧ?' ಗುಂಗೀಹುಳ ಹೊಕ್ಕಿತು. ನಾಳೆ ನಾಳೆ ಎಂದು ಹಾಗೇ ತಳ್ಳಿದರಾಯಿತು ಅಂದುಕೊಳ್ಳುತ್ತಿರುವಾಗ ಶುಕ್ರವಾರ ಬಂದು, 'ನೀ ನಿನ್ನೆ ಯಾಕ್ ಬರ್ಲಿಲ್ಲ? ನಮ್ಮ ಅಮ್ಮಾ ನೀ ಬರ್ತೀ ಅಂತ ಅರ್ಧಾ ಕೇಜಿ ಒಳ್ಳೇ ಅಕ್ಕಿ ತಂದಿಟ್ಟಿದ್ರು ಗೊತ್ತು?' ಮೊದಲ ಸಲ ಅವಳ ಕಣ್ಣು ತುಂಬಿಕೊಂಡಿದ್ದವು. ಬಹಳ ಕೆಟ್ಟೆನ್ನಿಸಿ, ಕ್ಷಮೆ ಕೇಳಿ ಭುಜ ದಡವಿದೆ. 'ಒಳ್ಳೇ ಅಕ್ಕಿ?' ನನ್ನ ಪ್ರಶ್ನಾರ್ಥಕ ನೋಟಕ್ಕೆ, 'ನಾವು ದಿನಾ ರೇಷನ್ ಅಕ್ಕೀನ ಉಣ್ಣೋದು, ಯಾರರ ಮನೀಗೆ ಬರ್ತಾರಂದ್ರಷ್ಟ ಸೋನಾ ಮಸೂರಿ' ಅಂದಳು. ರೇಷನ್ ಅಕ್ಕಿಯ ಬಗೆಗಿನ ನನ್ನ ಕುತೂಹಲವನ್ನು ಮತ್ತಷ್ಟು ಗ್ರಹಿಸಿದ ಆಕೆ, 'ಗೊತ್ತಿಲ್ಲಾ? ಇಷ್ಟ್ ದಪ್ ದಪ್ ಇರ್ತೇತಿ. ಉಮಗೊಂಡಕೂಡ್ಲೇ ನಂಥರಾ ಡುಮಕ್ ಡುಮಕ್ ಆಕ್ಕೇತಿ.' ನಗುನಗುತ್ತ ಗಲ್ಲ ಉಬ್ಬಿಸಿ ಹತ್ತಿರ ಬಂದಳು. ನಾ ಹಿಂದಿಂದೆ ಸರಿದೆ. ಗಾಳಿಯಲ್ಲೇ ಕೆನ್ನೆ ಹಿಂಡಿದಂತೆ ಮಾಡಿ ಅಚ್ಚೆ ಮಾಡಿ ಹೊರಟುಹೋದಳು. ಇಷ್ಟೆಲ್ಲ ಆದಮೇಲೂ ಅವರ ಮನೆಗೆ ಹೋಗದಿದ್ದರೆ ಸರಿಯಲ್ಲ ಅನ್ನಿಸಿ ಹೋಗುವ ನಿರ್ಧಾರ ಮಾಡಿದೆ. ಮನೆಗೆ ಬರುವಾಗ ದಾರಿಯಲ್ಲೆಲ್ಲ ಮನಸ್ಸು, ರೇಷನ್ ಅಕ್ಕಿ... ಅದೆಷ್ಟು ದಪ್ಪ ಇರಬಹುದು... ಒಂದು ತುತ್ತಿಗೆ ಅದೆಷ್ಟು ಅಗಳುಗಳು ಬರಬಹುದು? ಎಂದೆಲ್ಲ ಊಹಿಸಿಕೊಳ್ಳುತ್ತಿತ್ತು. ಅವರ ಮನೆಗೆ ಹೋಗಲು ನಮ್ಮ ಅಪ್ಪ ಅಮ್ಮನ ಬಳಿ ಅನುಮತಿ ಪಡೆಯುವುದು ಹೇಗೆ ಎನ್ನುವುದೂ ತಲೆಯಲ್ಲಿ ಓಡಾಡುತ್ತಿತ್ತು. ಕಾರಣವಿಲ್ಲದೆ ಅವರು ಕಳಿಸುವುದಿಲ್ಲವೆಂಬ ನಿರಾಸೆಯಲ್ಲೇ ರಾತ್ರಿ ಕೇಳಿಕೊಂಡೆ, ಆದರವರು ಏನನ್ನೂ ಪ್ರಶ್ನಿಸದೆ ಒಪ್ಪಿಬಿಟ್ಟರು!

ಮರುದಿನ ಶಾಕಾಂಬರಿ ನಮ್ಮನೆಗೆ ಕರೆದೊಯ್ಯಲು ಬಂದಾಗ ಹಿರಿಹಿರಿ ಹಿಗ್ಗಿ ಹೀರೇಕಾಯಿಯಾಗಿದ್ದಳು. ನನಗೋ ಒಳಗೊಳಗೇ ಟುಕುಟುಕು. ಅಡ್ಡದಾರಿ ಹಿಡಿದರೆ ಬೇಗ ಮನೆ ತಲುಪುತ್ತೇವೆಂದು ಹೇಳಿ ನಡೆಸಿಕೊಂಡೇ ಹೊರಟಳು. ಮನೆಗಳು ಹಿಂದಿಂದೆ ಸರಿದು ದೊಡ್ಡ ಬಯಲು ತೆರೆದುಕೊಳ್ಳುತ್ತಿದ್ದಂತೆ ಬಿಸಿಲು ರಣಗುಟ್ಟಿತು. ಕಟ್ಟಿಗೆಯ ಹಿಡಿಕೆಯ ಉದ್ದನೆಯ ಛತ್ರಿ ಏರಿಸಿ ನೆತ್ತಿ ಕಾಯ್ದಳು. ಅಂಗಾಲು ಉಸಿರಾಡಲೆಂದು ಚಪ್ಪಲಿ ಬಿಟ್ಟಾಗ ಚಾಪೆಮುಳ್ಳುಗಳು ಚುಚ್ಚಿಕೊಂಡವು. ಅವಳೇ ಬಾಗಿ ಮುಳ್ಳು ತೆಗೆದಳು. ಕುಳಿತುಕೊಳ್ಳಲು ಒಂದು ಕಲ್ಲು, ನೆರಳಿಗೆ ಒಂದು ಮರ ಇರದಷ್ಟು ಕುರುಚಲಿನ ಬಟಾಬಯಲದು. ನನಗೂ ಅಷ್ಟೊಂದು ಬೆವರು ಬರುತ್ತದೆ ಎಂದು ಆ ದಿನವೇ ಗೊತ್ತಾಗಿದ್ದು. ವಾಪಸ್ ಮನೆಗೆ ಹೋಗಿಬಿಡಲೆ? ತಿರುಗಿ ನೋಡಿದೆ, ಬೈತಲೆಯಂತೆ ಕಿಲೋ ಮೀಟರ್‌ಗಟ್ಲೆ ಸೀಳಿಕೊಂಡಿದ್ದ ಅಷ್ಟುದ್ದ ದಾರಿ ಕಂಡು ದಿಗಿಲಾಯಿತು. 'ಇನ್ನರ್ಧ ನಡೆದ್ರ ನಮ್ಮ ಮನೆನೇ ಬರುದು, ಅಲ್ಲೀತನಕ ನಿನ್ನನ್ನ ಕುತ್ತಿಮರಿ ಕೂಸುಮರಿ ಮಾಡಲಿ?' ಎಂದಳು. ಅವಳ ಮುಖದಲ್ಲಿ ಚೂರೂ ದಣಿವಿನ ಸುಳಿವಿರಲಿಲ್ಲ. ನನಗೋ ಅವಳ ಯಾವ ಚೇಷ್ಟೆಗಳನ್ನೂ